**ಓ.ಎಸ್. ನಂ. 45/2021** **ಡಿ.ಡಬ್ಲ್ಯೂ- 3**

**<u>ಸಾಕ್ಷಿಯನ್ನು ದಿನಾಂಕ 27.9.2023 ರಂದು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.</u>**

<u>ಮುಖ್ಯ ವಿಚಾರಣೆಃ ಪ್ರತಿವಾದಿ ಪರ ವಕೀಲರಿಂದಃ</u>

ನಾನು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಸತ್ಯವಾಗಿದ್ದು, ಅದರಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ನಿಡಿ 1 ಕ್ರಯಪತ್ರಕ್ಕೆ ನಾನು ಸಾಕ್ಷಿದಾರನಾಗಿ ಸಹಿ ಮಾಡಿರುತ್ತೇನೆ. ಸದರಿ ಕ್ರಯಪತ್ರವನ್ನು ವಾದಿ ಮತ್ತು ಅವರ ಹೆಂಡತಿ ಸೇರಿ ಪ್ರತಿವಾದಿಗೆ ಬರೆದು ಕೊಟ್ಟಿರುತ್ತಾರೆ. ಸಾಕ್ಷಿದಾರರು ನಿಡಿ 1 ರಲ್ಲಿರುವ ವಾದಿಯ ಮತ್ತು ವಾದಿಯ ಹೆಂಡತಿಯ ಸಹಿಯನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಡಿ ಈಗಾಗಲೇ ನಿಡಿ 1(ಎ) ಮತ್ತು 1(ಬಿ) ಎಂದು ಗುರುತಿಸಲಾಗಿದೆ. ಸಾಪ್ಷಿದಾರರು ಅವರ ಸಹಿಯನ್ನು ನೋಡಿ ಗುರುತಿಸಿದ್ದು ಈಗಾಗಲೇ ಅದನ್ನು 1(ಡಿ) ಎಂದು, ಇನ್ನೊಬ್ಬ ಸಾಕ್ಷಿದಾರರಾಗಿ ಲಿಂಗರಾಜು ಎಂಬುವವರು ಸಹಿ ಮಾಡಿದ್ದು ಅವರ ಸಹಿಯನ್ನು ಈಗಾಗಲೇ ನಿಡಿ 1(ಸಿ) ಎಂದು ಗುರುತಿಸಲಾಗಿರುತ್ತದೆ.

ಪಾಟೀ ಸವಾಲುಃ ವಾದಿ ಪರ ವಕೀಲರು ಸಮಯ ಕೋರಿದ್ದು, ಮುಂದೂಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.